(*f*) 205 applications.

(*g*) The details have been given.

ಶ್ರೀ ಪಿ. ಮುನಿಯಪ್ಪ.—ಸ್ವಾಮಿ ಭೂಮಿಯನ್ನು ಹಂಚಿಕೆಕ್ಕೆ ಸಂದರ್ಭದಲ್ಲಿ ಸರ್ಕಾರದ ಆದೇಶದ ಪ್ರಕಾರ ಹರಿಜನ ಗಿರಿಜನರಿಗೆ ೫೦ ಪರ್ಸೆಂಟ್ ಭೂಮಿಯನ್ನು ಹರಿಜನ ಗಿರಿಜನರಿಗೆ ಕೊಡಬೇಕು ಎಂದು ಇದೆ. ಆದರೆ ನಮ್ಮ ಮುಳಬಾಗಿಲು ತಾಲ್ಲೂಕಿನಲ್ಲಿ ಭೂಮಿಯನ್ನು ಹಂಚಿಕೆಕ್ಕೆ ಸಂದರ್ಭದಲ್ಲಿ ಹರಿಜನಗಿರಿಜನರಿಗೆ ಭೂಮಿಯನ್ನು ಹಂಚಿರುವುದು ೫೦ ಪರ್ಸೆಂಟಿಗಿಂತ ಕಡಿಮೆಯಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ —ಈಗ ನನ್ನ ಮುಂದೆ ಇರತಕ್ಕ ಅಂಕಿ ಅಂಶಗಳ ಪ್ರಕಾರ ಅಲ್ಲಿ ಹರಿಜನ ಗಿರಿಜನಗಿರಿಗೆ ತೇಕಡಾ ೪೮ ರಷ್ಟು ದೊರಕಿದೆ.

ಶ್ರೀ ಪಿ. ಮುನಿಯಪ್ಪ.—ಈಗ ಅಲ್ಲಿ ಹರಿಜನಗಿರಿಜನರಿಗೆ ಪೂರ್ತಿ ೫೦ ಪರ್ಸೆಂಟ್ ಜಮೀನನ್ನು ಕೊಟ್ಟಿಲ್ಲ. ಅದನ್ನು ಸರಿಪಡಿಸುತ್ತೀರಾ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಈಗ ಇಲ್ಲಿ ಒಟ್ಟು ಇರತಕ್ಕದ್ದು. ೮೫೮೨ ಎಕರೆ ೩೮ ಗುಂಟೆ ಜಮೀನು. ಇದರಲ್ಲಿ ಈಗ ವಿತರಣೆಯಾಗಿರುವುದು ೪೨೬೬-೩೪ ಗುಂಟೆ ಜಮೀನು. ಇನ್ನು ಉಳಿದಿರುವ ಜಮೀನನ್ನು ಹಂಚಿಕೆ ಮಾಡುವಾಗ ೫೦ ಪರ್ಸೆಂಟ್ ಜಮೀನು ಹರಿಜನಗಿರಿಜನರಿಗೆ ತಲುಪುವಂತೆ ಮಾಡ ಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಅವರು ಅದನ್ನು ಮಾಡುತ್ತಾರೆ.

ಶ್ರೀ ಪಿ. ಮುನಿಯಪ್ಪ —ಲ್ಯಾಂಡ್ ಗ್ರಾಂಟ್ ಕಮಿಟಿಯವರು ಶಿಫಾರಸ್ಸು ಮಾಡಿ ಕಳುಹಿಸಿದ ಅರ್ಜಿಗಳನ್ನು ತಾಲ್ಲೂಕು ಆಫೀಸಿನವರು ಪರಿಶೀಲನೆಮಾಡಿ ಬಡವರಿಗೆ ಜಮೀನನ್ನು ಮಂಜೂರುಮಾಡದೆ ಹಾಗೆಯೇ ಪೆಂಡಿಂಗ್ ಇಟ್ಟುಕೊಂಡಿದ್ದಾರೆ. ಅವುಗಳನ್ನು ಪರಿಶೀಲನೆಮಾಡಿ ಅವುಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಲ್ಯಾಂಡ್ ಗ್ರಾಂಟ್ ಕಮಿಟಿಯಲ್ಲಿ ಅರ್ಜಿಗಳು ತೀರ್ಮಾನವಾಗಿ ಅಧಿಕಾರಿಗಳಿಗೆ ಹೋದ ಮೇಲೆ ಪ್ರತಿ ತಿಂಗಳು ಎಷ್ಟೆಷ್ಟು ಅರ್ಜಿಗಳು ವಿಲೇವಾರಿಯಾಗಿವೆ ಎಷ್ಟು ಸಾಗುವಳಿ ಚೀಟಿಯನ್ನು ಕೊಟ್ಟಿದೆ ಎಂಬುದನ್ನು ಪ್ರತಿ ತಿಂಗಳೂ ಸರ್ಕಾರಕ್ಕೆ ಕಳುಹಿಸಬೇಕು ಎಂದು ಅಧಿಕಾರಿ ಗಳಿಗೆ ತಿಳಿಸಿದ್ದೇವೆ. ಕೆಲವು ತಾಲ್ಲೂಕುಗಳಲ್ಲಿ ಅಂಥಾ ಅರ್ಜಿಗಳು ಏನಾದರೂ ಬಾಕಿ ಇದ್ದರೆ ಅದನ್ನೂ ಕೂಡ ಇಷ್ಟು ಅವಧಿಯೊಳಗೆ ಕಂಪ್ಲೀಟ್ ಮಾಡಿ ಸಾಗುವಳಿ ಚೀಟಿ ಕೊಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ (ಈ).—ಪ್ರಶ್ನೆಗೆ ಉತ್ತರವಾಗಿ ೪೮ ಪರ್ಸೆಂಟ್ ಭೂಮಿಯನ್ನು ಕೊಡಲಾಗಿದೆಯೆಂದು ಹೇಳಿದೆ. ಲ್ಯಾಂಡ್ ಗ್ರಾಂಟ್ ಕಮಿಟಿಯಲ್ಲಿ ಆ ರೀತಿಯಾಗಿ ಡಿಸ್ಟ್ರಿಬ್ಯೂಟ್ ಮಾಡಿದ್ದಾರೆಂದು ತಿಳಿದು ಬಂದಿದೆ ಆದಮೇಲೆ ಮಿಕ್ಕ ೨ ಪರ್ಸೆಂಟ್‌ಗೆ ಜನರಿಂದ ಅದಕ್ಕಾಗಿ ಅಪ್ಲಿಕೇಷನ್ ಬಂದಿಲ್ಲವೇ ? ಆ ೪೮ ಪರ್ಸೆಂಟ್‌ನಲ್ಲಿ ಯೋಗ್ಯವಾದ ಜಮೀನನ್ನು ಎಷ್ಟು ಜನ ಹರಿಜನರಿಗೆ ಕೊಟ್ಟಿದ್ದೀರಿ ?

ಶ್ರೀ ಎನ್ ಹುಚ್ಚಮಾಸ್ತಿಗೌಡ —ಒಟ್ಟು ಅರ್ಜಿ ಬಂದಿರುವುದು ಪರಿಶಿಷ್ಟ ಜನಾಂಗದವರಿಂದ ೪೭೧ ಪರಿಶಿಷ್ಟ ಬುಡಕಟ್ಟಿನ ಜನರಿಂದ ೬೨ ಅರ್ಜಿಗಳು. ಬೇರೆಯವರಿಂದ ೬೪ ಅರ್ಜಿಗಳು ಬಂದಿವೆ. ಅರ್ಜಿಗಳು ಬಂದಿರುವುದೇನೋ ಸಾಕಾರಷ್ಟು ಸಂಖ್ಯೆಯಲ್ಲಿದೆ. ಆದರೆ ಲ್ಯಾಂಡ್‌ಗಳನ್ನು ಕೊಡತಕ್ಕ ಮೇಳೆಯಲ್ಲಿ ೪೨೬೬ ಎಕರೆ ೩೪ ಗುಂಟೆಗಳ ಪೈಕಿ ೨೦೫೮ ಎಕರೆ ೧೨ ಗುಂಟೆಗಳನ್ನು ಮಾತ್ರ ಈಗ ಕೊಟ್ಟಿದೆ. ೨೯೭೬ ಎಕರೆ ಜಮೀನನ್ನು ಹರಿಜನರಿಗೆ ಕೊಡುವುದನ್ನು ಇನ್ನೂ ಕೊಟ್ಟಿಲ್ಲ. ಉಳಿದವುಗಳನ್ನು ಕೊಡುವಾಗ ಅದನ್ನೂ ಸಹ ಭರ್ತಿಮಾಡಬೇಕೆಂದಿದ್ದೇವೆ. ಆದರೆ ಎಲ್ಲೆಲ್ಲಿ ಫಲವತ್ತಾದ ಜಮೀನನ್ನು ಕೊಟ್ಟಿದೆ, ಯಾರು ಯಾರಿಗೆ ಎಷ್ಟೆಷ್ಟು ಕೊಟ್ಟಿದೆ ಎಂಬ ಬಗ್ಗೆ ವಿವರ ಈಗ ನನ್ನ ಮುಂದಿಲ್ಲ.

Teaching Science and Technology Subjects in Kannada Language.

689. SRI A. R. BADARINARAYAN (Shimoga)—

Will the Minister for Education be pleased to state :—

(a) the steps Government has taken for the better understanding and assimilation by the students of High Schools and Junior Colleges of Science and Technology subjects in the Kannada language

(b) whether there are any proposals in the matter before Government under consideration ?

SRI M. MALLIKARJUNASWAMY (Minister for Education).—

(a) Only Science is taught as a core subject in High Schools but not, Technology. Text Books in Science in Kannada and other six languages for High Schools are prepared and published by the Directorate of Text Books In addition, teachers refer to other standards, text books and put further efforts to make the students understand scientific concepts in Kannada.

Science is taught as an elective in Junior colleges in Kannada. But Technology has not been introduced as elective in Junior Colleges,

No text books have been prescribed for the elective subjects at the P.U.C. stage. The Pre-University Education Board recommends books written by authors in Kannada for reference by students, or for purchase by the libraries of the Institutions.

(b) No.

ಶ್ರೀ ಎ. ಆರ್. ಬದರೀನಾರಾಯಣ್ —ಈ ಶಾಲೆಗಳಲ್ಲಿ ಲೈಬ್ರರಿ ಮತ್ತು ರೀಡಿಂಗ್‌ರೂಂ ಫೀಸನ್ನು ಕಲೆಕ್ಟ್ ಮಾಡುತ್ತಿರುವಾಗ ಸರ್ಕಾರದಿಂದಲೇ ವಿಜ್ಞಾನ ವಿಚಾರದಲ್ಲಿ ಒಳ್ಳೆಯ ಪುಸ್ತಕಗಳನ್ನು ಅಚ್ಚುಹಾಕಿಸಿ ಮಕ್ಕಳಿಗೆ ಅವನ್ನು ಸರಬರಾಜುಮಾಡುವುದು ಸೂಕ್ತವಲ್ಲವೇ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೋ ಅದು ಸೂಕ್ತವಾದ ಸಲಹೆ.

ಶ್ರೀ ಎ. ಆರ್. ಬದರೀನಾರಾಯಣ್.—ಬಹಳ ವಂದನೆಗಳು. ನಾನು ಹೇಳಿದ್ದು ಸೂಕ್ತವಾದ ಸಲಹೆಯೆಂಬುದಾಗಿ ಹೇಳಿದಿರಿ. ತಾಲೆಗಳಲ್ಲಿ ಮಕ್ಕಳು ಉಪಯೋಗಿಸುವ ಲೈಬ್ರರಿ ಮತ್ತು ರೀಡಿಂಗ್ ರೂಂ ಪುಸ್ತಕಗಳನ್ನು ಸೆಲೆಕ್ಟ್‌ಮಾಡಿ ಮಕ್ಕಳಿಂದ ಆದರ ಬಗ್ಗೆ ಫೀಸನ್ನು ವಸೂಲು ಮಾಡುವುದು ಅಲ್ಲಿನ ಹೆಡ್‌ಮಾಸ್ಟರ್ ಅವರ ಡಿಸ್ಕ್ರಿಷನ್ನಿಗೇ ಬಿಟ್ಟಿದೆ. ಅಲ್ಲಿ ಮಕ್ಕಳು ಒಳ್ಳೆಯ ಪುಸ್ತಕಗಳನ್ನು ತೆಗೆದು ಕೊಳ್ಳುವುದಕ್ಕೆ ಸಾಕಷ್ಟು ಅನುಕೂಲಗಳಿಲ್ಲ ಆದ್ದರಿಂದ ವಿಜ್ಞಾನ ವಿಚಾರದಲ್ಲಿ ಮಕ್ಕಳಿಗೆ ಬಹಳ ಜೆನ್ನಾಗಿ ಅರ್ಥವಾಗುವ ರೀತಿಯಲ್ಲಿ ಸಂಬಂಧಪಟ್ಟ ಪುಸ್ತಕಗಳನ್ನು ಸರ್ಕಾರದವರೇ ಪ್ರಿಂಟ್ ಮಾಡಿಸಿ, ಅದನ್ನು ಆಮೇಲೆ ರಿ-ಕೂಪ್ ಮಾಡಿಕೊಳ್ಳುವುದು ಅವಶ್ಯಕವಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ —ಇದು ಬಹಳ ಅವಶ್ಯಕ. ಅದನ್ನು ಯಾರೂ ಅಲ್ಲಗೆಳೆಯುವ ಹಾಗೇ ಇಲ್ಲ. ಅದೇ ಪ್ರಕಾರ ಡೈರೆಕ್ಟೊರೇಟ್ ಆಫ್ ಟೆಕ್ಸ್ಟ್ ಬುಕ್ಸ್‌ನವರು, ಸೈಂಟಿಸ್ಟ್ಸ್, ಎಜುಕೇಷನಿಸ್ಟ್ಸ್, ಪ್ರಾಥಮಿಕ, ಮಾಧ್ಯಮಿಕ ಮತ್ತು ಪೌಢಶಾಲೆಗಳವರು ಇವತ್ತು ಬಹಳ ಒಳ್ಳೆಯ ರೀತಿಯಲ್ಲಿ ಈ ವಿಜ್ಞಾನವನ್ನು ಬಲಪಡಿಸಬೇಕೆಂದು ಹೆಚ್ಚು ಹೆಚ್ಚು ಪ್ರಯತ್ನಮಾಡುತ್ತಿದ್ದಾರೆ. ಆ ಒಂದು ದೃಷ್ಟಿಯಿಂದ ಯಾನಿಸ್ಕೊ ಅವರೂ ಸಹ ಸೋರ್ಸಸ್ ಆಫ್ ಬುಕ್ ಅನ್ ಸೈನ್ಸ್ ಟೀಡಿಂಗ್ ಎಂಬ ಪುಸ್ತಕವನ್ನು ಕನ್ನಡಕ್ಕೆ ತರ್ಜುಮೆಮಾಡಿಸಿ ಸುಮಾರು ೧೦೦ ಕಾಪಿಗಳನ್ನು ಮಾಡಿಸಿ ಅದನ್ನು ಎಲ್ಲರಿಗೂ ಕೊಡುತ್ತಿದ್ದಾರೆ. ಆದರೂ ವಿಸ್ತಾರವಿಜ್ಞಾನ ಇಲಾಖೆಯವರೂ ಸಹ ಬೇಸಿಕ್ ಅನ್‌ಸೈನ್ಸ್ ಸೀರೀಸ್ ಎಂಬುದನ್ನೂ ಸಹ ಪ್ರಕಟಿಸುತ್ತಿದ್ದಾರೆ. ಅನೇಕ ರೀತಿಯಲ್ಲಿ ಅವರೂ ಸಹ ಇನ್-ಸರ್ವಿಸ್ ಟ್ರೈನಿಂಗನ್ನೂ ಕೊಡುತ್ತಿದ್ದಾರೆ. ಬರೀ ಪುಸ್ತಕಗಳನ್ನು ಸಂಬರಾಜುಮಾಡುವುದೇ ಆಷ್ಟೆ ಅಲ್ಲ ; ಅದಂಲ್ಲಿ ಉಪಾಧ್ಯಾಯರುಗಳೂ ಸಹ ಪೂರ್ಣವಾಗಿ ಅರ್ಹತೆ ಪಡೆಯಬೇಕೆದು ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಒಂದು ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದೇವೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.